Reservation in Allotment of Fishing Boats to Harijans and Girijans

76. Sri A. RAMACHANDRA (Sulya).—

Will the Minister of State for Ports and Fisheries be pleased to state :—

(*a*) whether reservation is being made to Harijans and Girijans while giving any type of help to fishermen by Fisheries Departmant in the State;

(*b*) the number of mechanised boats given to fisherman on loan basis and by way of help and the places where they have been given ?

Sri H. C. LINGA REDDY (Minister of State for Ports and Fisheries).—

(*a*) No.

(*b*) So far, 125 boats have been given in North Kanara District and 65 boats in South Kanara District on loan basis and also by way of help through fisheries department and 27 and 173 boats, respectively, have been given through Fisheries Co-operative Societies.

ಶ್ರೀ ಎ. ರಾಮಚಂದ್ರ.—ಇಲ್ಲ (ಎ) ಪ್ರಶ್ನೆಗೆ ಉತ್ತರವಾಗಿ ಇಲ್ಲ ಎಂದು ತಿಳಿಸಿದ್ದಾರೆ. ಆದರೆ ಈ ಮೀನುಗಾರಿಕೆ ಇಲಾಖೆಯಲ್ಲಿ ಏಕೆ ಹರಿಜನ ಗಿರಿಜನರಿಗೆ 18 ಪರ್ಸೆಂಟ್ ದೋಣಿಗಳನ್ನು ರಿಜರ್ವ್ ಮಾಡುವುದಕ್ಕೆ ಕಾರ್ಯಕ್ರಮವನ್ನು ಕೈಗೊಂಡಿಲ್ಲ ?

† ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಆ 18 ಪರ್ಸೆಂಟ್ ರಿಜರ್ವೇಷನ್ ಹೇಳಿರತಕ್ಕದು ನೌಕರಿ ಗಳನ್ನು ಕೊಡತಕ್ಕವಿಚಾರದಲ್ಲಿ ಮಾತ್ರ. ಆದರೆ ಈ ಮೀನುಗಾರಿಕೆ ಇಲಾಖೆಯಲ್ಲಿ ಕೂಡ ಹರಿಜನ ಗಿರಿಜನರಿಂದ ಬಂದ ಅರ್ಜಿಗಳಿಗೆ ನರ್ಕಾರದವರು ಪುರಸ್ಕಾರ ನೀಡಿದ್ದಾರೆ. ಆದರೆ ಹಾಗೆ ರಿಜರ್ವ್ ಮಾಡುವುದಕ್ಕೆ ಯಾವ ರೂಲ್ಸ್‌ಗಳೂ ಇಲ್ಲ.

ಶ್ರೀ ಎ. ರಾಮಚಂದ್ರ.—ಈ ವಿಚಾರದಲ್ಲಿ ಹರಿಜನ ಗಿರಿಜನರಿಂದ ಬಂದಿದ್ದ ಅರ್ಜಿಗಳೆಷ್ಟು ? ಮತ್ತು ಆ ಪೈಕಿ ಎಷ್ಟು ಜನರಿಗೆ ಸೌಲಭ್ಯ ನೀಡಲಾಗಿದೆ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಆ ಜನರು ಯಾವ ಯಾವ ಸಹಾಯವನ್ನು ಕೇಳಿದ್ದರು, ಎಷ್ಟು ಜನ ಕೇಳಿದ್ದರೆಂಬ ವಿವರಗಳು ಸದ್ಯಕ್ಕೆ ನನ್ನಲಿಲ್ಲ. ಆದ್ದರಿಂದ ಇದಕ್ಕೆ ಸದ್ಯದಲ್ಲಿ ಉತ್ತರ ಕೊಡುವುದಕ್ಕಾಗುವುದಿಲ್ಲ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಆಲ್ ಇಂಡಿಯಾ ಡೆವಲಪ್‌ಮೆಂಟ್ ಸ್ಕೀಮು ಗಳಲ್ಲಿ ಈ ಹರಿಜನ ಗಿರಿಜನರಿಗೆ ಹಣವನ್ನು ಹಂಚುವುದರಲ್ಲಿ ಕೂಡ ಶೇ. 18 ರಿಜರ್ವ್‌ಮಾಡಬೇಕೆಂದು ಹೇಳಿರುವಾಗ ಈ ಇಲಾಖೆಯಲ್ಲೂ ಕೂಡ ಈ ನಿಮ್ನವರ್ಗದವರಿಗೂ ಮತ್ತು ನಿಮ್ನಪಂಗಡದವರಿಗೂ ಒಂದು ವಿಶೇಷರೀತಿಯ ಅನುಕೂಲಮಾಡಿಕೊಡುವುದಕ್ಕೆ ಅವಕಾಶ ಮಾಡಿಕೊಡುತ್ತೀರಾ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಸದ್ಯಕ್ಕೆ ಹರಿಜನ ಗಿರಿಜನರಲ್ಲಿ ಒಟ್ಟು 93 ಜನರಿಗೆ ಮೀನು ಹಿಡಿಯುವುದರಲ್ಲಿ ತರಬೇತಿ ನೀಡಲಾಗಿದೆ. ಈ ಪೈಕಿ 52 ಜನರು ಇನ್‌ಲ್ಯಾಂಡ್ ಮೀನುಗಾರಿಕೆಯಲ್ಲೂ ಮತ್ತು 41 ಜನರು ಮೆರೈನ್ ಮೀನುಗಾರಿಕೆಯಲ್ಲೂ ಟ್ರೈನಿಂಗನ್ನು ಪಡೆದಿದ್ದಾರೆ. ಇವರಿಗೆ ಸಮುದ್ರದಲ್ಲಿ ಹೋಗಿ ಮೀನುಹಿಡಿಯುವುದು ಅಷ್ಟು ಸುಲಭವಲ್ಲವಾದ ಕಾರಣ ಇನ್‌ಲ್ಯಾಂಡ್ ಟ್ರೈನಿಂಗ್ ಪಡೆದವರಿಗೆ ಸೂಕ್ತ ಸಹಾಯಗಳನ್ನು ಮಾಡಿದ್ದೇವೆ.

ಶ್ರೀ ಚಿಕ್ಕೇಗೌಡ.—ಇವರಿಗೆ 18 ಪರ್ಸೆಂಟ್ ಮೀಸಲಾಗಿಟ್ಟರೇಕೆ ಆಗುವುದಿಲ್ಲ ? ಅದರಲ್ಲಿ ಏನು ಕಷ್ಟ ಇದೆ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಇದು ಪರಿಶೀಲನೆ ಮಾಡತಕ್ಕ ವಿಷಯ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಈಗ ಹರಿಜನ ಗಿರಿಜನರಿಗೆ ಕೊಟ್ಟಿರುವ ದೋಣಿಗಳು ಏನಿವೆ ಅವುಗಳ ಬಗ್ಗೆ ಸರ್ಕಾರದ ವತಿಯಿಂದ ಎಷ್ಟು ಸಹಾಯಧನವನ್ನು ಕೊಟ್ಟಿದ್ದೀರಿ, ಬೇರೆ ಸವಲತ್ತುಗಳನ್ನು ಏನೇನು ಕೊಟ್ಟಿದ್ದೀರಿ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ—ಎಷ್ಟು ದೋಣಿಗಳನ್ನು ಕೊಟ್ಟಿದೆ ಎಂಬ ಬಗ್ಗೆ ಲೆಕ್ಕ ಇದೆ. ಅದನ್ನು ಈಗಾಗಲೇ ಹೇಳಿದ್ದೇನೆ. ಈಗಾಗಲೇ ಸರ್ಕಾರದ ಕಡೆಯಿಂದ 605 ಬೋಟುಗಳನ್ನು ಕೊಟ್ಟಿದ್ದೇವೆ. 4ನೇ ಪಂಚವಾರ್ಷಿಕ ಯೋಜನೆಯಲ್ಲಿ 350 ಮೆಕನೈಜ್ಡ್ ಬೋಟುಗಳನ್ನು ಕೊಡ ಬೇಕೆಂದು ತೀರ್ಮಾನಮಾಡಿದ್ದೇವೆ. ನಬ್ಸಿಡಿಯನ್ನು ಶೇಕಡ 50 ರಷ್ಟು ಕೊಡುತ್ತಿದ್ದೇವೆ. ಇಂಜಿನ್ ಖರ್ಚಿನಲ್ಲಿ ಈಗ ಶೇಕಡ 25ರಷ್ಟು ಕಡಿಮೆಮಾಡಬೇಕೆಂದು ತೀರ್ಮಾನಮಾಡಿ 350 ಬೋಟ್‌ಗಳಿಗೆ ಬದಲು 700 ಬೋಟ್‌ಗಳನ್ನು ಸರ್ಕಾರದವರು ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ಲೋನ್ ಮುಖಾಂತರ ಈಗಾಗಲೇ 200 ಬೋಟ್‌ಗಳನ್ನು ಕೊಟ್ಟಿದ್ದೇವೆ. 4ನೇ ಪಂಚವಾರ್ಷಿಕಯೋಜನೆ ಮುಗಿಯುವುದರೊಳಗೆ ಒಂದು ಸಾವಿರ ಬೋಟ್‌ಗಳನ್ನು ಕೊಡಬೇಕೆಂದಿದ್ದೇವೆ.

ಶ್ರೀ ಎಂ. ಶ್ರೀನಿವಾಸ ನಾಯಕ್.—ಇಂಡಿಯಾ ಸರ್ಕಾರದಿಂದ ನಮಗೆ ಟ್ರಾಲರ್ಸ್‌ಗಳೇ ನಾದರೂ ಬಂದಿವೆಯೇ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಎರಡು ಟ್ರಾಲರ್‌ಗಳನ್ನು ಇಂಡಿಯಾ ಸರ್ಕಾರದವರು ಕೊಟ್ಟಿದ್ದಾರೆ. ಒಂದನ್ನು ಮುಂದಿನ ತಿಂಗಳು 10ನೇ ತಾರೀಖಿನಲ್ಲಿ ಗೋವಾ ಷಿಪ್ ಯಾರ್ಡ್‌ನಲ್ಲಿ ರ್ಯಾಂಡ್ ಮಾಡಬೇಕೆಂದಿದ್ದೇವೆ. 15 ಲಕ್ಷರೂಪಾಯಿಗಳ ಮೌಲ್ಯದ 2 ಟ್ರಾಲರ್ಸ್‌ಗಳನ್ನು ಉಪ ಯೋಗಿಸುವುದರಿಂದ ಡೀಪ್ ಸಿ ಫಿಷಿಂಗ್‌ಗೆ ಅನುಕೂಲವಾಗುತ್ತದೆ.

Smt. WINNIFRED F. FERNANDES.—You have said that you have given 125 boats for North Canara and 265 boats through Co-operative Societies and Fisheries Department in South Kanara. What is the time you have taken to supply them ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ನಮ್ಮ ಬೋಟ್ ಬಿಲ್ಡಿಂಗ್ ಯಾರ್ಡ್‌ನವರು ಅದನ್ನು 2–3 ವರ್ಷಗಳಿಂದ ಕೊಡುತ್ತಿದ್ದಾರೆ.

Mr. SPEAKER.—Question Nos. 116, 322 and 327 may be taken up together.

Implementation of Recommendations of Tukol Commission

116. Sri D. B. KALMANKAR (Aland).—

Will the Minister for Finance, Planning and Youth Welfare be pleased to state:—

the Recommendations of the Tukol Commission that have been approved by the Government and given effect to ?

Sri RAMAKRISHNA HEGDE (Minister for Finance, Planning and Youth Welfare).—

(1) The Recommendation in respect of D.A., C.C.A. and H.R.A. to Government Servants, Officials of Local Bodies and aided Institutions, has been accepted in Government Order No. FD 20 SRP (1) 69, dated 10th Mach 1969.

(2) Relief suggested to Pensioners has also been implemented with effect from 1st April 1969 in Government Order No. FD 24 SRP (1) 68, dated 1st April 1968.